## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 901 (976) |
| ಸದಸ್ಯರ ಹೆಸರು | : | ಶ್ರೀ ಎಂ. ಎಲ್ ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15.12.2025 |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕೇತರ ವೃಂದಗಳಲ್ಲಿ (ಗ್ರೂಪ್ 'ಸಿ' ಮತ್ತು 'ಡಿ') ಮಂಜೂರಾಗಿರುವ 3500 ಅನುದಾನಿತ ಹುದ್ದೆಗಳಲ್ಲಿ 1700 ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕಿದೆಯೇ; ಇದ್ದಲ್ಲಿ ಯಾವ ಕಾಲಮಿತಿಯೊಳಗೆ ಸದರಿ ಹುದ್ದೆಗಳನ್ನು ತುಂಬಲಾಗುವುದು; | ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅನುದಾನಿತ ಇಂಜಿನಿಯರಿಂಗ್ ಮತ್ತು ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದಗಳಲ್ಲಿ ತೆರವಾಗಿರುವ ಬೋಧಕೇತರ ಹುದ್ದೆಗಳ ವಿವರ ಕೆಳಕಂಡಂತಿದೆ:<br><br>**ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು**<br>ವೃಂದ / ಮಂಜೂರಾದ ಹುದ್ದೆಗಳು / ಭರ್ತಿಯಾದ ಹುದ್ದೆಗಳು / ಖಾಲಿ ಹುದ್ದೆಗಳು<br>ಸಿ / 689 / 223 / 466<br>ಡಿ / 511 / 192 / 319 |
| ಆ) | ಅನುದಾನಿತ ಸಂಸ್ಥೆಗಳಲ್ಲಿ ಬೋಧಕ ವೃಂದದ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಅನುಮತಿ ನೀಡಲಾಗುತ್ತಿದ್ದು ಹಲವಾರು ವರ್ಷಗಳಿಂದ ಬೋಧಕೇತರ ವೃಂದಗಳಲ್ಲಿ ತೆರವಾಗುವ ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಹೊರತುಪಡಿಸಿ ಸಾಮಾನ್ಯ ವರ್ಗದ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ಭರ್ತಿ ಮಾಡಲು ಅನುಮತಿ ನೀಡುತ್ತಿಲ್ಲ; | **ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳು**<br>ವೃಂದ / ಮಂಜೂರಾದ ಹುದ್ದೆಗಳು / ಭರ್ತಿಯಾದ ಹುದ್ದೆಗಳು / ಖಾಲಿ ಹುದ್ದೆಗಳು<br>ಸಿ / 1376 / 735 / 641<br>ಡಿ / 971 / 578 / 393<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 551 ಯುಪಿಸಿ 99, ದಿನಾಂಕ: 07.08.2003 ರಲ್ಲಿ ಪ್ರಕಟಿಸಲಾದ *Karnataka Educational Institutions (Collegiate Education) Rules, 2003* ನ ನಿಯಮ 8(2) ರನ್ವಯ ದಿನಾಂಕ:01.03.2001 ನಂತರ ನಿವೃತ್ತಿ, ನಿಧನ, ರಾಜೀನಾಮೆ ಅಥವಾ ಇತರ ಕಾರಣಗಳಿಂದ ಖಾಲಿಯಾದ ಬೋಧಕೇತರ ಹುದ್ದೆಗಳು ಶಾಶ್ವತವಾಗಿ ಅನುದಾನರಹಿತ ಹುದ್ದೆಗಳೆಂದು ಪರಿಗಣಿಸಲಾಗಿದೆ. ಹೀಗಾಗಿ ಅಂತಹ ಹುದ್ದೆಗಳನ್ನು ಸರ್ಕಾರದಿಂದ ಭರ್ತಿ ಮಾಡಲು ಅವಕಾಶ ಇರುವುದಿಲ್ಲ.<br><br>ಆದರೆ ಅಂತಹ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳನ್ನು ಸಂಸ್ಥೆಯ ಆಡಳಿತ ಮಂಡಳಿಯೇ ಭರ್ತಿ ಮಾಡಿಕೊಳ್ಳಬಹುದಾಗಿರುತ್ತದೆ. |

<table>
<tr><td>ಇ)</td><td>ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕೇತರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆಯೇ: ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡದಿದ್ದಲ್ಲಿ ಅನುದಾನಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಯೋಗಿಕ ತರಗತಿ ಯಂತ್ರೋಪಕರಣಗಳ ನಿರ್ವಹಣೆ ಹಾಗೂ ಕಛೇರಿ ಕಾರ್ಯಗಳನ್ನು ಯಾರು ನಿರ್ವಹಿಸುತ್ತಾರೆ.</td><td rowspan="2">ಮೇಲಿನ ನಿಯಮದನ್ವಯ ದಿನಾಂಕ: 01.03.2001 ರ ನಂತರ ನಿವೃತ್ತಿ, ನಿಧನ, ರಾಜೀನಾಮೆ ಅಥವಾ ಇತರ ಕಾರಣಗಳಿಂದ ಖಾಲಿಯಾದ ಶಾಶ್ವತ ಅನುದಾನರಹಿತ ಹುದ್ದೆಗಳನ್ನು ಸಂಸ್ಥೆಯ ಆಡಳಿತ ಮಂಡಳಿಯೇ ಭರ್ತಿ ಮಾಡಬೇಕಾಗಿರುತ್ತದೆ ಮತ್ತು ಆ ಹುದ್ದೆಗಳಿಗೆ ಸಂಬಂಧಿಸಿದ ವೇತನ ಹಾಗೂ ಇತರ ಭತ್ಯೆಗಳನ್ನು ಸಂಸ್ಥೆಯೇ ತನ್ನ ಸ್ವಂತ ಸಂಪನ್ಮೂಲಗಳಿಂದ ಪಾವತಿಸಬೇಕಾಗಿರುತ್ತದೆ.</td></tr>
<tr><td>ಈ)</td><td>ಬೋಧಕೇತರ ವೃಂದದವರ ಕಾರ್ಯವನ್ನು ಬೋಧಕ ವೃಂದದವರು ನಿರ್ವಹಿಸಲು ಸಾಧ್ಯವೇ ಇದರಿಂದ ವಿದ್ಯಾರ್ಥಿಗಳ ತರಗತಿಗಳಿಗೆ ಅಡಚಣೆಯಾಗುವುದಿಲ್ಲವೇ ಬಹುಪಾಲು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳು ಹಿಂದುಳಿದ / ಗ್ರಾಮೀಣ ಪ್ರದೇಶದಲ್ಲಿದ್ದು ಸಾವಿರಾರು ಬೋಧಕೇತರ ಹುದ್ದೆಗಳ ಖಾಲಿಯಿರುವ ಕಾರಣ ಈ ಭಾಗದ ವಿದ್ಯಾರ್ಥಿಗಳು ಗುಣಮಟ್ಟದ ತಾಂತ್ರಿಕ ಶಿಕ್ಷಣದಿಂದ ವಂಚಿತರಾಗುವುದಿಲ್ಲವೆ?</td></tr>
</table>

**ಸಂಖ್ಯೆ:ಇಡಿ 133 ಟಿಪಿಇ 2025**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು